# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1060 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಟಿ ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25.07.2024 |
| ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಿಟ್‌ಕಾಯಿನ್ ಪ್ರಕರಣದ ತನಿಖೆ ಆರಂಭಗೊಂಡಿದ್ದು ಯಾವಾಗ; ದಾಖಲಿಸಿರುವ ಪ್ರಕರಣಗಳೆಷ್ಟು; ತನಿಖೆ ಯಾವ ಹಂತದಲ್ಲಿದೆ; ಒಟ್ಟು ಎಷ್ಟು ಬಿಟ್‌ಕಾಯಿನ್‌ಗಳು ಕಳುವಾಗಿದೆ; ಇದರ ಮೌಲ್ಯ ಎಷ್ಟು; (ಸಮಗ್ರ ಮಾಹಿತಿ ನೀಡುವುದು) | **ಬಿಟ್ ಕಾಯಿನ್ ಪ್ರಕರಣದ ತನಿಖೆಯ ಆರಂಭ:-** ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊ.ಸಂ.153/2020 ಕಲಂ 120(ಬಿ), 379, 384, 420, 465, 468, 471 ರೆ/ವಿ 34 ಐಪಿಸಿ ಹಾಗೂ 66, 66ಸಿ ಐಟಿ ಆಕ್ಟ್-2000 ಪ್ರಕರಣದಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಗಳು ಭಾಗಿಯಾಗಿರುವ ಸಾಧ್ಯತೆ ಇದ್ದು, ಆರೋಪಿಗಳು ಸೈಬರ್ ವಿಷಯಗಳಲ್ಲಿ ಪರಿಣಿತರಿದ್ದು ಬಿಟ್‌ಕಾಯಿನ್ ಮತ್ತು ಡಾರ್ಕ್‌ನೆಟ್‌ಗಳಲ್ಲಿ ವ್ಯವಹಾರ ಮಾಡಿರುವ ಮಾಹಿತಿ ಇರುವುದರಿಂದ ಈ ಎಲ್ಲಾ ಆರೋಪಗಳ ಕುರಿತು ಸಮಗ್ರ ತನಿಖೆ ಕೈಗೊಳ್ಳುವ ಸಲುವಾಗಿ ಸರ್ಕಾರದ **ಆದೇಶ ಸಂಖ್ಯೆ: ಹೆಚ್‌ಡಿ 48 ಸಿಒಡಿ 2023(2), ಬೆಂಗಳೂರು ದಿನಾಂಕ: 30/06/2023** ರಂದು ಪೊಲೀಸ್ ಮಹಾನಿರ್ದೇಶಕರು, ಸಿಐಡಿ ರವರ ಸಾಮಾನ್ಯ ನಿಯಂತ್ರಣ ಮತ್ತು ಮೇಲ್ವಿಚಾರಣೆಯಲ್ಲಿ ಎಡಿಜಿಪಿ ದರ್ಜೆಯ ಅಧಿಕಾರಿಯೊಬ್ಬರ ಮುಖ್ಯಸ್ಥಿಕೆಯಲ್ಲಿ ವಿಶೇಷ ತನಿಖಾ ತಂಡವೊಂದನ್ನು(SIT) ರಚಿಸಲಾಗಿದ್ದು, ಕಾಟನ್‌ಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಮೊ.ಸಂ.153/2020 ರ ಬಿಟ್ ಕಾಯಿನ್ ಪ್ರಕರಣದೊಂದಿಗೆ ರಾಜ್ಯದಲ್ಲಿ ದಾಖಲಾಗಿರುವ ಈ ಮಾದರಿಯ ಇತರೆ ಪ್ರಕರಣಗಳನ್ನೂ ಸಹ ಪರಿಶೀಲಿಸಲು ವಿಶೇಷ ತನಿಖಾ ತಂಡ(SIT)ಕ್ಕೆ ಸೂಚಿಸಲಾಗಿತ್ತು. ಈ ಮೂಲಕ ಬಿಟ್ ಕಾಯಿನ್ ಪ್ರಕರಣದ ತನಿಖೆಯನ್ನು ಆರಂಭಿಸಲಾಗಿದೆ.<br><br>**ತನಿಖೆಯ ಹಂತ :-** ಬಿಟ್ ಕಾಯಿನ್ ಪ್ರಕರಣ ಸಂಬಂಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಟ್ಟು 8 ಪ್ರಕರಣಗಳು ದಾಖಲಾಗಿದ್ದು, ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. ಒಟ್ಟು 8 ಪ್ರಕರಣ ಪೈಕಿ ಅನುಬಂಧ-1ರ ಕ್ರಮ ಸಂಖ್ಯೆ:3 ಮತ್ತು 8ರ ಪ್ರಕರಣಗಳ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಉಳಿದ ಪ್ರಕರಣಗಳು ತನಿಖಾ ಹಂತದಲ್ಲಿರುತ್ತದೆ,<br><br>**ಬಿಟ್‌ಕಾಯಿನ್‌ಗಳ ಕಳುವು:-** ಪಿರ್ಯಾದುದಾರರಾದ ಶ್ರೀ ಹರೀಶ್ ಬಿ.ವಿ ರವರು ಸುಮಾರು 60.6 ಒಟ್ಟು ಬಿಟ್‌ಕಾಯಿನ್‌ಗಳು ಕಳುವಾಗಿರುವ ಬಗ್ಗೆ ನೀಡಿದ ದೂರಿನ ಆಧಾರದ ಮೇಲೆ ತುಮಕೂರು ಹೊಸ ಬಡಾವಣೆ ಪೊಲೀಸ್ ಠಾಣೆಯಲ್ಲಿ ಮೊ.ಸಂಖ್ಯೆ:85/2017 ಅನ್ನು ದಾಖಲಿಸಿ ಪ್ರಕರಣದ ತನಿಖೆ ಕೈಗೊಳ್ಳಲಾಗಿದೆ. ಕಳುವಾದ ಬಿಟ್‌ಕಾಯಿನಗಳ ಅಂದಿನ ಮಾರುಕಟ್ಟೆ ಮೌಲ್ಯ ಒಟ್ಟು 1,14,00,000/-(ಒಂದು ಕೋಟಿ ಹದಿನಾಲ್ಕು ಲಕ್ಷ |

| | | |
|---|---|---|
| | | ರೂಪಾಯಿಗಳು) ಗಳಾಗುತ್ತದೆ.<br><br>ಉಳಿದಂತೆ ದಾಖಲಾದ ಪ್ರಕರಣಗಳಲ್ಲಿ ಎಷ್ಟು ಬಿಟ್‌ಕಾಯಿನ್ ಕಳುವಾಗಿರುವ ಬಗ್ಗೆ ನಿರ್ದಿಷ್ಟ ಸಂಖ್ಯೆಯನ್ನು ದೂರಿನಲ್ಲಿ ನಮೂದಿಸಿರುವುದಿಲ್ಲ. |
| ಆ) | ಪೊಲೀಸ್ ಅಧಿಕಾರಿ/ ಸಿಬ್ಬಂದಿಗಳೂ ಸೇರಿದಂತೆ ಪ್ರಕರಣದಲ್ಲಿ ಈವರೆಗೆ ಎಷ್ಟು ಜನರನ್ನು ಬಂಧಿಸಲಾಗಿದೆ; ಬಂಧಿತರ ವಿರುದ್ಧ ಹೂಡಿರುವ ಪ್ರಕರಣಗಳ ಮಾಹಿತಿ ನೀಡುವುದು; ಪ್ರಕರಣದಲ್ಲಿ ನಾಪತ್ತೆಯಾದವರ ವಿವರ ನೀಡುವುದು; | ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ಪ್ರಕರಣದ ತನಿಖಾಧಿಕಾರಿ ಹತ್ಯೆಗೆ ಯತ್ನ ನಡೆದಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಹತ್ಯೆಯನ್ನು ನಡೆಸಿದ್ದು ಯಾರು; | ಬಿಟ್‌ಕಾಯಿನ್ ಪ್ರಕರಣದ ತನಿಖಾಧಿಕಾರಿಯ ಹತ್ಯೆ ಯತ್ನ ನಡೆದಿರುವುದಿಲ್ಲ, ಆದರೆ ಎಎಸ್ಐ ಶ್ರೀ ಭಾಸ್ಕರ್ ರವರ ದೂರಿನ ಮೇರೆಗೆ ಕಾಟನ್‌ಪೇಟೆ ಪೊಲೀಸ್ ಠಾಣೆಯ ಮೊ.ಸಂ.302/2023 ರ ಪ್ರಕರಣದಲ್ಲಿ ಆರೋಪಿತರಾದ ಕೆ.ಜಿ. ನಗರ ಪೊಲೀಸ್ ಠಾಣೆಯ ಮೊ.ಸಂ. 91/2020ರ ಪ್ರಕರಣದ ಹಿಂದಿನ ತನಿಖಾಧಿಕಾರಿಯಾದ ಶ್ರೀ ಶ್ರೀಧರ್ ಪೂಜಾರ್, ಡಿವೈಎಸ್‌ಪಿ ರವರು, ತನಿಖೆ ಸಮಯದಲ್ಲಿ ದಸ್ತಗಿರಿ ಮಾಡಲು ಹೋದ ಸಿಬ್ಬಂದಿಗಳ ಮೇಲೆ ಕಾರನ್ನು ಚಲಾಯಿಸಿ ಹತ್ಯೆ ಮಾಡಲು ಪ್ರಯತ್ನಪಟ್ಟಿದ್ದರಿಂದ, ಸದರಿಯವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಮೊ.ಸಂಖ್ಯೆ:19/2024 ಪ್ರಕರಣವು ದಾಖಲಾಗಿರುತ್ತದೆ. |
| ಈ) | ಪ್ರಕರಣದ ತನಿಖೆ ವಿಳಂಬಗೊಳ್ಳಲು ಕಾರಣಗಳೇನು; ತ್ವರಿತಗತಿಯಲ್ಲಿ ತನಿಖೆ ಪೂರ್ಣಗೊಳಿಸಲು ಕೈಗೊಂಡಿರುವ ಕ್ರಮಗಳೇನು? | ಅನುಬಂಧ-1 ರಲ್ಲಿ ನೀಡಲಾದ 8 ಪ್ರಕರಣಗಳ ಪೈಕಿ 2 ಪ್ರಕರಣಗಳನ್ನು ತನಿಖೆ ನಡೆಸಿ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿದ್ದು, ಉಳಿದ ಪ್ರಕರಣಗಳು ತನಿಖಾ ಹಂತದಲ್ಲಿರುತ್ತದೆ. ಪ್ರಕರಣದಲ್ಲಿ ಹೊರ ದೇಶಗಳಲ್ಲಿರುವ ಕಂಪನಿಗಳು, ಕ್ರಿಪ್ಟೋ ಎಕ್ಸ್‌ಚೇಂಜ್‌ಗಳು ಮತ್ತು ಇಂಟರ್ ನ್ಯಾಷನಲ್ ಎಕ್ಸ್‌ಚೇಂಜ್‌ಗಳ, ಕಾನೂನಿನ ನಿಯಮಗಳನ್ವಯ ಸಾಕ್ಷಿಗಳನ್ನು ಸಂಗ್ರಹಿಸ ಬೇಕಾಗಿರು ವುದರಿಂದ ಮತ್ತು ಇಂಟರ್ ಪೋಲ್ ಮುಖಾಂತರ ಮಾಹಿತಿ ಕಲೆ ಹಾಕುತ್ತಿದ್ದು ವಿವಿಧ ದೇಶಗಳಿಂದ ಮಾಹಿತಿಯು ನಿಧಾನಗತಿಯಿಂದ ಬರುತ್ತಿರುವುದರಿಂದ ತನಿಖೆ ವಿಳಂಬವಾಗುತ್ತಿದ್ದು, ತ್ವರಿತಗತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಲು ಸದರಿ ಸಂಸ್ಥೆಗಳಿಗೆ ಮೇಲಿಂದ ಮೇಲೆ ನೆನಪೋಲೆಗಳನ್ನು ಕಳುಹಿಸಲಾಗುತ್ತಿದ್ದು ಈ ನಿಟ್ಟಿನಲ್ಲಿ ಪ್ರಕರಣಗಳ ತನಿಖೆಯನ್ನು ತ್ವರಿತಗೊಳಿಸಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |

ಸಂಖ್ಯೆ: ಹೆಚ್‌ಡಿ 45 ಎಸ್‌ಡಿಎನ್ 2024

**(ಡಾ: ಜಿ.ಪರಮೇಶ್ವರ)**

ಗೃಹ ಸಚಿವರು

ಅನುಬಂಧ–1

| ಕ್ರ.ಸಂ | ಪೊಲೀಸ್ ಠಾಣೆಯ ಹೆಸರು, ಮೊಕದ್ದಮೆ ಸಂಖ್ಯೆ ಮತ್ತು ಕಲಂ | ಆದೇಶ ಮತ್ತು ದಿನಾಂಕ | ಎಸ್‌ಐಟಿ ಯಿಂದ ಮುಂದಿನ ತನಿಖೆ ನಡೆಸಲು ನ್ಯಾಯಾಲಯದಿಂದ ಅನುಮತಿ ಪಡೆದ ದಿನಾಂಕ/ ತನಿಖೆ ಪ್ರಾರಂಭ ದಿನಾಂಕ |
|---|---|---|---|
| 1 | ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂ:153/2020 ಕಲಂ: 120(ಬಿ), 379, 384, 420, 465, 468, 471 ರೆ/ವಿ 34 ಐಪಿಸಿ | ಸಂ.ಹೆಚ್‌ಡಿ/48/ಸಿಒಡಿ/2023 30.06.2023 | 10.07.2023 |
| 2 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ: 45/2020 ಕಲಂ ಕಲಂ 66(ಸಿ), 66(ಡಿ) ಐ.ಟಿ. ಆಕ್ಟ್–2000 ಮತ್ತು ಕಲಂ 420 ಐಪಿಸಿ. | ಸಂ.ಹೆಚ್‌ಡಿ/48/ಸಿಒಡಿ/2023 14.07.2023 | 19.07.2023 |
| 3 | ಬೆಂಗಳೂರು, ಅಶೋಕ ನಗರ ಪೊಲೀಸ್ ಠಾಣೆ ಮೊ.ಸಂ.287/2020 ಕಲಂ 406, 420 ಐಪಿಸಿ. | ಸಂ.ಹೆಚ್‌ಡಿ/48/ಸಿಒಡಿ/2023 14.07.2023 | 21.07.2023 |
| 4 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ.4801/2018 ಕಲಂ 65, 66, 66(ಸಿ), 66(ಡಿ) ಐಟಿ ಆಕ್ಟ್–2000 ಹಾಗೂ ಕಲಂ 419, 420, 471, 468, 474, 465 ಐಪಿಸಿ. | ಸಂ.ಹೆಚ್‌ಡಿ/48/ಸಿಒಡಿ/2023 11.08.2023 | 24.08.2023 |
| 5 | ತುಮಕೂರು ನ್ಯೂ ಎಕ್ಸ್‌ಟೆನ್ಷನ್ ಪೊಲೀಸ್ ಠಾಣೆ ಮೊ.ಸಂ.85/2017 ಕಲಂ 66, 67, 68 ಐಟಿ ಆಕ್ಟ್–2000 ಹಾಗೂ ಕಲಂ 420 ಐಪಿಸಿ. | ಸಂ.ಹೆಚ್‌ಡಿ/48/ಸಿಒಡಿ/2023 14.07.2023 | 18.07.2023 |
| 6 | ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂ. 302/2023 ಕಲಂ 120ಬಿ, 204, 409 & 426 ಐಪಿಸಿ | ಸಂ.ಹೆಚ್‌ಡಿ/48/ಸಿಒಡಿ/2023 11.08.2023 | 14.08.2023 |
| 7 | ಸಿಐಡಿ, ಸಿಸಿಪಿಎಸ್ ಮೊ.ಸಂ.09/2019 ಕಲಂ 43 ರೆ/ವಿ 66, 66(ಸಿ), 66(ಬಿ) ಐಟಿ ಆಕ್ಟ್ ಮತ್ತು ಕಲಂ 419, 420 ಐಪಿಸಿ. | ಸಂ.ಹೆಚ್‌ಡಿ/48/ಸಿಒಡಿ/2023 14.07.2023 | 18.07.2023 |
| 8 | ಬೆಂಗಳೂರು ಕೆ.ಜಿ.ನಗರ ಪೊಲೀಸ್ ಠಾಣೆ ಮೊ.ಸಂ.91/2020 ಕಲಂ 20(ಬಿ), 23(ಬಿ), 27(ಎ) ಎನ್.ಡಿ.ಪಿ.ಎಸ್ ಆಕ್ಟ್–1985 | ಸಂ.ಹೆಚ್‌ಡಿ/48/ಸಿಒಡಿ/2023 14.07.2023 | 18.07.2023 |

<u>ಅನುಬಂಧ–2</u>

| ಕ್ರ.ಸಂ. | ಮೊಕದ್ದಮೆ ಸಂಖ್ಯೆ | ಆರೋಪಿಗಳು | ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಸೇರಿದಂತೆ ಪ್ರಕರಣದಲ್ಲಿ ಈ ವರೆಗೆ ಬಂದಿಸಲಾದ ವಿವರಗಳು |
|---|---|---|---|
| 1 | ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂ:153/2020 | 1)ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br>3) ಎ–3 ಸುನೀಷ್ ಹೆಗಡೆ<br>4) ಎ–4ಪ್ರಸಿದ್ದ ಶೆಟ್ಟಿ<br>5) ಎ–5 ಸುಜಯ್‌ರಾಜ್ | 1)ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br>3) ಎ–3 ಸುನೀಷ್ ಹೆಗಡೆ<br>4) ಎ–4ಪ್ರಸಿದ್ದ ಶೆಟ್ಟಿ<br>5) ಎ–5 ಸುಜಯ್‌ರಾಜ್<br><br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 2 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ: 45/2020 | 1) ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br>3)ಎ–3 ಸುನೀಷ್ ಹೆಗಡೆ | 1) ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br><br>ಮೇಲ್ಕಂಡ ಇಬ್ಬರು ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ<br><br>3)ಎ–3 ಸುನೀಷ್ ಹೆಗಡೆ ರವರು ಘನ ನ್ಯಾಯಾಲಯದಲ್ಲಿ ದಸ್ತಗಿರಿ ಕ್ರಮ ಜರುಗಿಸದೆ ಇರಲು ರಕ್ಷಣೆ ಪಡೆದುಕೊಂಡಿರುತ್ತಾರೆ. |
| 3 | ಬೆಂಗಳೂರು, ಅಶೋಕ ನಗರ ಪೊಲೀಸ್ ಠಾಣೆ ಮೊ.ಸಂ.287/2020 | 1)ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br>3)ಅಜಿತ್ ಖಂಡೆಲ್‌ವಾಲ್ | 1)ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ–2 ರಾಬಿನ್ ಖಂಡೆಲ್‌ವಾಲ<br><br>ಮೇಲ್ಕಂಡ ಇಬ್ಬರು ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 4 | ಬೆಂಗಳೂರು ನಗರ, ಸೈಬರ್ ಕ್ರೈಂ ಪೊಲೀಸ್ ಠಾಣೆ ಮೊ.ಸಂ.4801/2018 | 1) ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2)ಎ–2 ದೀಪಕ್ ಗೌಡ<br>3)ಎ–3 ಸೂಮಶೇಖರ್<br>4)ಎ–4 ವೀರಗಂಗದರಯ್ಯ | 1)ಎ–1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2)ಎ–2 ದೀಪಕ್ ಗೌಡ<br>3)ಎ–3 ಸೂಮಶೇಖರ್<br>4)ಎ–4 ವೀರಗಂಗದರಯ್ಯ ಸವದತ್ತಿಮಟ್<br>5)ಎ–5ರಾಜುಗೌಡ |

| | | | |
|---|---|---|---|
| | | ಸವದತ್ತಿ ಮಟ್<br>5)ಎ-5ರಾಜುಗೌಡ | ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 5 | ತುಮಕೂರು ನ್ಯೂ ಎಕ್ಸ್‌ಟೆನ್ಷನ್ ಪೊಲೀಸ್ ಠಾಣೆ ಮೊ.ಸಂ.85/2017 | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ | 1) ಎ-1 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ರಾಬಿನ್ ಖಂಡೇಲ್‌ವಾಲ ತನಿಖಾ ಕಾಲದಲ್ಲಿ ಸಿಐಡಿಯ ಎಸ್‌ಐಟಿ ವಿಚಾರಣೆಯಲ್ಲಿ ಬಂದಿಸಲಾಗಿದೆ |
| 6 | ಬೆಂಗಳೂರು ಕೆ.ಜಿ.ನಗರ ಪೊಲೀಸ್ ಠಾಣೆ ಮೊ.ಸಂ.91/2020 ಕಲಂ 20(ಬಿ), 23(ಬಿ), 27(ಎ) ಎನ್.ಡಿ.ಪಿ.ಎಸ್ ಆಕ್ಟ್-1985 | 1)ಎ-1 ಸುಜಯ್‌ರಾಜ್<br>2)ಎ-2 ಹೇಮಂತ್ ಮುದ್ದಪ್ಪ<br>3)ಎ-4 ಸುನೀಷ್ ಹೆಗಡೆ<br>4)ಎ-5 ಪ್ರಸಿದ್ಧ ಶೆಟ್ಟಿ<br>5)ಎ-6ಪಂಕಜ್ ಕೊಠಾರಿ<br>6)ಎ-7 ದರ್ಶನ್ ಕುಮಾರ್<br>7)ಎ-8 ಮದನ್ ಮೋಹನ್ ಬಾರ್ಕಿ<br>8)ಎ-9 ಆಶಿಸ್ ಭಿಮಸೇನ ಮೊಹಾರಿ<br>9)ಎ10 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>10)ಎ-11 ಪ್ರಭಾಕರ್ ಎ.ಜಿ<br>11)ಎ-12 ರಾಬಿನ್ ಖಂಡೇಲ್ ವಾಲಾ | 1)ಎ-1 ಸುಜಯ್‌ರಾಜ್<br>2)ಎ-2 ಹೇಮಂತ್ ಮುದ್ದಪ್ಪ<br>3)ಎ-4 ಸುನೀಷ್ ಹೆಗಡೆ<br>4)ಎ-5 ಪ್ರಸಿದ್ಧ ಶೆಟ್ಟಿ<br>5)ಎ-6ಪಂಕಜ್ ಕೊಠಾರಿ<br>6)ಎ-7 ದರ್ಶನ್ ಕುಮಾರ್<br>7)ಎ-8 ಮದನ್ ಮೋಹನ್ ಬಾರ್ಕಿ<br>8)ಎ-9 ಆಶಿಸ್ ಭಿಮಸೇನ ಮೊಹಾರಿ<br>9)ಎ10 ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>10)ಎ-11 ಪ್ರಭಾಕರ್ ಎ.ಜಿ<br>11)ಎ-12 ರಾಬಿನ್ ಖಂಡೇಲ್ ವಾಲಾ<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 7 | ಸಿಐಡಿ, ಸಿಸಿಪಿಎಸ್ ಮೊ.ಸಂ. 09/2019 | 1)ಎ-1 ಶ್ರೀ ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ಸುನೀಷ್ ಹೆಗಡೆ<br>3) ಎ-3 ಹೇಮಂತ್ ಮುದ್ದಪ್ಪ<br>4) ಎ-4 ಪ್ರಸಿದ್ಧ ಶೆಟ್ಟಿ<br>5) ಎ-5 ರಾಬಿನ್ ಖಂಡೇಲ್ ವಾಲಾ<br>6)ಎ-6 ರಣದೀರ್ ಆಶರ್<br>7)ಎ-7 ಸಿಯಾರಾಮ್ ಪಾಸ್ವನ್<br>8)ಎ-8 ಮಣಿಕಂಠ<br>9)ಎ-9 ಧನಪಾಲ್<br>10)ಎ-10 ಸತೀಶ್<br>11)ಎ-11 ಸೈಯದ್ ಯುಸಫ್<br>12)ಎ-12 ಎಸ್ ಎಂ ನಿಜಾಮುದ್ದಿನ್<br>13) ಎ-13 ಸುಶೀಲ್ ಚಂದ್ರ<br>14) ಎ-14 ವಿನಿತ್‌ಕುಮಾರ್<br>15)ಎ-15 ಕೃಷ್ಣ ಪಾಲ್ | 1)ಎ-1 ಶ್ರೀ ಶ್ರೀ ಕೃಷ್ಣ ರಮೇಶ್ @ ಶ್ರೀಕಿ<br>2) ಎ-2 ಸುನೀಷ್ ಹೆಗಡೆ<br>3) ಎ-3 ಹೇಮಂತ್ ಮುದ್ದಪ್ಪ<br>4) ಎ-4 ಪ್ರಸಿದ್ಧ ಶೆಟ್ಟಿ<br>5) ಎ-5 ರಾಬಿನ್ ಖಂಡೇಲ್ ವಾಲಾ<br>6)ಎ-6 ರಣದೀರ್ ಆಶರ್<br>7)ಎ-7 ಸಿಯಾರಾಮ್ ಪಾಸ್ವನ್<br>8)ಎ-8 ಮಣಿಕಂಠ<br>9)ಎ-9 ಧನಪಾಲ್<br>10)ಎ-10 ಸತೀಶ್<br>11)ಎ-11 ಸೈಯದ್ ಯುಸಫ್<br>12)ಎ-12 ಎಸ್ ಎಂ ನಿಜಾಮುದ್ದಿನ್<br>13) ಎ-13 ಸುಶೀಲ್ ಚಂದ್ರ<br>14) ಎ-14 ವಿನಿತ್‌ಕುಮಾರ್<br>15)ಎ-15 ಕೃಷ್ಣ ಪಾಲ್<br>16)ಎ-16 ರತ್ನಾಕರ್<br>17) ಎ-17 ಭಾವನ ರತ್ನಾಕರ್ |

| | | | |
|---|---|---|---|
| | | 16)ಎ–16 ರತ್ನಾಕರ್<br>17) ಎ–17 ಭಾವನ ರತ್ನಾಕರ್<br>18)ಎ–18 ರಾಜ್‌ಕುಮಾರ್ | 18)ಎ–18 ರಾಜ್‌ಕುಮಾರ್<br>ಮೇಲ್ಕಂಡ ಎಲ್ಲಾ ಆರೋಪಿಗಳನ್ನು ಈ ಹಿಂದೆ ಸ್ಥಳಿಯ ಪೊಲೀಸರು ದಸ್ತಗಿರಿ ಮಾಡಿರುತ್ತಾರೆ. ನ್ಯಾಯಾಲಯದಿಂದ ಜಾಮೀನು ಪಡೆದಿರುತ್ತಾರೆ |
| 8 | ಕಾಟನ್ ಪೇಟೆ ಪೊಲೀಸ್ ಠಾಣೆ ಮೊ.ಸಂಖ್ಯೆ: 302/2023 | ಕೆ.ಜಿ. ನಗರ ಪೊಲೀಸ್ ಠಾಣೆ ಮೊ.ಸಂಖ್ಯೆ:91/2020 ರ ಪ್ರಕರಣದ ಹಿಂದಿನ ತನಿಖಾಧಿಕಾರಿಗಳು | ಸದರಿ ಪ್ರಕರಣದಲ್ಲಿ ಆರೋಪಿಯಾದ ಎ–1 ಶ್ರೀಧರ್ ಕೆ. ಪೂಜಾರ್ ರವರ ವಿರುದ್ಧ ತೆಗೆದುಕೊಳ್ಳುವ ಕಾನೂನಿನ ಕ್ರಮದ ಬಗ್ಗೆ ಘನ ಉಚ್ಚ ನ್ಯಾಯಾಲಯವು (Not to take any precipitative action in the absence of any incriminating material against the petitioner) ಎಂದು ಆದೇಶಿಸಿರುತ್ತಾರೆ.<br>ಎ–2 ಪ್ರಶಾಂತ್ ಬಾಬು ರವರು ತಲೆಮರೆಸಿಕೊಂಡಿರುತ್ತಾರೆ.ಇವರು ನಿರೀಕ್ಷಣಾ ಜಾಮೀನು ಅರ್ಜಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆ ಮುಗಿದಿದ್ದು ಉಚ್ಚ ನ್ಯಾಯಾಲಯವು ಆದೇಶ ಕಾಯ್ದಿರಿಸಿದೆ. |

ಮೇಲ್ಕಂಡ ಎಸ್‌ಐಟಿ ತನಿಖೆಯಲ್ಲಿರುವ 8 ಪ್ರಕರಣಗಳನ್ನು ಹೊರತುಪಡಿಸಿ, ಈ ಕೆಳಕಂಡ ಪ್ರಕರಣವು ಸಿಐಡಿ ಘಟಕದಲ್ಲಿ ತನಿಖೆಯಲ್ಲಿರುತ್ತದೆ.

| | | | |
|---|---|---|---|
| 1 | ಸಿಐಡಿ ಸಿಸಿಪಿಎಸ್ ಮೊ.ಸಂಖ್ಯೆ:01/2024 | 1)ಎ–1 ಸಂತೋಷ್ ಕುಮಾರ್<br>2)ಎ–2 ಲಕ್ಷ್ಮೀಕಾಂತಯ್ಯ ಪೊಲೀಸ್ ಇನ್ಸ್‌ಪೆಕ್ಟರ್<br>3) ಎ–3 ಚಂದ್ರಾಧರ್ ಪೊಲೀಸ್ ಇನ್ಸ್‌ಪೆಕ್ಟರ್<br>4) ಎ–4 ಪ್ರಶಾಂತ್ ಬಾಬು ಪೊಲೀಸ್ ಇನ್ಸ್‌ಪೆಕ್ಟರ್<br>5) ಶ್ರೀಧರ್ ಕೆ. ಪೂಜಾರ್ | 1)ಎ–1 ಸಂತೋಷ್ ಕುಮಾರ್<br>2)ಎ–2 ಲಕ್ಷ್ಮೀಕಾಂತಯ್ಯ ಪೊಲೀಸ್ ಇನ್ಸ್‌ಪೆಕ್ಟರ್<br>3) ಎ–3 ಚಂದ್ರಾಧರ್ ಪೊಲೀಸ್ ಇನ್ಸ್‌ಪೆಕ್ಟರ್<br>4) ಎ–4 ಪ್ರಶಾಂತ್ ಬಾಬು ಪೊಲೀಸ್ ಇನ್ಸ್‌ಪೆಕ್ಟರ್<br>5) ಶ್ರೀಧರ್ ಕೆ. ಪೂಜಾರ್ ರವರು ಘನ ಉಚ್ಚ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿರುತ್ತಾರೆ. |